**ಸಾಕ್ಷಿಯನ್ನು ದಿಃ 24.10.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಎನ.ಎಂ.ಟಿ ವಕೀಲರಿಂದಃ**

ಸದರಿ ಅಪಘಾತಕ್ಕೆ ಸಂಬಂಧಿಸಿದಂತೆ ಪಿರ್ಯಾದಿಯನ್ನು ಮೋಹನ್ ಎನ್ನುವರು ನೀಡಿರುತ್ತಾರೆ. ಸದರಿ ಮೋಹನ್ ರವರು ಸದರಿ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿರುತ್ತಾರೆ. ಸದರಿ ಅಪಘಾತದ ಸಮಯದಲ್ಲಿ ನನ್ನ ಮಗ ಚಲಾಯಿಸುತಿದ್ದ ವಾಹನದ ಹಿಂದೆ ಮುಂದೆ ಸದರಿ ಮೋಹನ್ ರವರು ಸಹ ಹೋಗುತಿದ್ದರು. ಸದರಿ ಅಪಘಾತದ ದಿನದಂದೆ ಪಿರ್ಯಾದನ್ನು ನೀಡಿರುತ್ತಾರೆ. ದಿನಾಂಕ 22 ರಂದು ಸದರಿ ಅಪಘಾತವಾಗಿದ್ದು ದಿನಾಂಕ 23 ರಂದು ಪಿರ್ಯಾದನ್ನು ನೀಡಿರುತ್ತಾರೆ ಎಂದರೆ ಸದರಿ ಅಪಘಾತ ರಾತ್ರಿಯಾಗಿದ್ದರಿಂದ ಪಿರ್ಯಾದಿಯನ್ನು ಮಾರನೆ ದಿವಸ ಬೆಳಿಗ್ಗೆ ನೀಡಿರುತ್ತಾರೆ. ಅಪಘಾತಪಡಿಸಿದ ವಾಹನ ಎನ್ನಲಾದ ವಾಹನವು ಮುನಿ ರೆಡ್ಡಿಯವರಿಗೆ ಸೇರಿರುತ್ತದೆ. ಸದರಿಯವರು ನನಗೆ ಪರಿಚಯವಿಲ್ಲ. ಸದರಿ ಅಪಘಾತಪಡಿಸಿದ ವಾಹನದ ಚಾಲಕ ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ಅಪಘಾತಕ್ಕೆ ಒಳಪಟ್ಟ ಮೋಟಾರ್ ಸೈಕಲ್ ವಾಹನವನ್ನು ನನ್ನ ಮಗ ಚಲಾಯಿಸಿಕೊಂಡು ಹೋಗುತ್ತಿದ್ದರು, ಸದರಿ ವಾಹನಕ್ಕೆ ನನ್ನ ಮಗ ಮಾಲೀಕನೀರುತ್ತಾನೆ. ನನ್ನ ಮಗನಿಗೆ ವಾಹನ ಚಲಾಯಿಸಲು ವಾಹನ ಚಾಲನ ಪರವಾನಗಿ ಇರುತ್ತದೆ. ರಾತ್ರಿ ಹೊತ್ತು ವಾಹನ ಚಲಾಯಿಸುವಾಗ ವಾಹನದ ಹಿಂದಿನ ರೆಡ್ ಲೈಟ್ ಆನ್ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಅಪಘಾತದ ರಸ್ತೆಯಲ್ಲಿ ವಾಹನ ಸಂಚಾರ ಕಡಿಮೆ ಇತ್ತು. ನನ್ನ ಮಗ ವಾಹನವನ್ನು ಜೋರಾಗಿ ಓಡಿಸುವುದಿಲ್ಲ. ಸದರಿ ಅಪಘಾತಕ್ಕೆ ಸಂಬಂಧಿಸಿದ ಸ್ಥಳ ನಾಕಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಸದರಿ ಸ್ಥಳ ನಾಕಶೆಯನ್ನು ಹಾಜರುಪಡಿಸಲು ತೊಂದರೆ ಇದೇಯಾ ಎಂದರೆ ಇಲ್ಲ. ಸದರಿ ಅಪಘಾತದ ಸಮಯದಲ್ಲಿ ನನ್ನ ಮಗ ಮತ್ತು ನನ್ನ ಮಗನ ಹಿಂದೆ ಇನ್ನೊಂದು ವಾಹನದಲ್ಲಿ ಬರುತಿದ್ದ ಮೋಹನ್ ರವರು ಅತೀ ವೇಗವಾಗಿ ಚಲಾಯಿಸುತಿದ್ದು U-Turn ಮಾಡುತಿದ್ದ ಸದರಿ ಅಪಘಾತಪಡಿಸಿದೆ ಎನ್ನಲಾದ ವಾಹನಕ್ಕೆ ನನ್ನ ಮಗನ ಅಜಾಗರುಕತೆಯಿಂದ ಮತ್ತು ಆತನನ ತಪ್ಪಿನಿಂದ ಸದರಿ ವಾಹನಕ್ಕೆ ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತದ ಪರಿಣಾಮ ನನ್ನ ಮಗ ಚಲಾಯಿಸುತಿದ್ದ ವಾಹನದ ಮುಂಭಾಗ ಜಖಂಗೊಂಡಿರುತ್ತದೆ ಎಂದರೆ ಸರಿ. ಐ ಎಂ ವಿ ವರದಿ ಪ್ರಕಾರ ಸದರಿ ಅಪಘಾತ ಪಡಿಸಿದ ವಾಹನದ ಡೀಸೆಲ್ ತುಂಬಿಸುವ ಟ್ಯಾಂಕರ್ ಹತ್ತಿರ

ಜಖಂ ಆಗಿದ್ದರಿಂದ ಸದರಿ ವಾಹನ U-Turn ಮಾಡುವಾಗ ನನ್ನ ಮಗ ಆತನ ಮೋಟಾರ್ ಸೈಕಲ್ ಅನ್ನು ಅಜಾಗರುಕತೆಯಿಂದ ಚಾಲನೆ ಮಾಡಿಕೊಂಡು ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಸದರಿ ನಿಜಾಂಶ ಗೊತ್ತಾಗುತ್ತದೆ ಎಂದು ಉದ್ದೇಶಪೂರ್ಕವಾಗಿ ಸ್ಥಳ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತದ ಸಮಯದಲ್ಲಿ ನನ್ನ ಮಗ helmet ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತವಾದ ನಂತರ ಮೊದಲಿಗೆ ನನ್ನ ಮಗನನ್ನು ಸುಹಾಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಸುಹಾಸ್ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಮಾಡಿಕೊಂಡು ನಂತರ ಹೆಚ್ಚಿ ನ ಚಿಕಿತ್ಸೆಗೆ ಎನ್.ಹೆಚ್. ಆಸ್ಪತ್ರೆಗೆ ಸೇರಿಸಿರುತ್ತಾರೆ. ಸದರಿ ಆಸ್ಪತ್ರೆಯ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ಎನ್ ಹೆಚ್. ಆಸ್ಪತ್ರೆಯಿಂದ ಪೊಲೀಸರಿಗೆ ಮಾಹಿತಿಯನ್ನು ನೀಡಿರುತ್ತಾರೆ. ನಿಪಿ.13 - Discharge Summary ಯಲ್ಲಿ ನನ್ನ ಮಗ ಅಪಘಾತದ ಸಮಯದಲ್ಲಿ helmet ಧರಿಸಿಲ್ಲ ಎಂದು ನಮೂದಾಗಿರುತ್ತದೆ ಎಂದರೆ ನನ್ನ ಮಗ ವಾಹನ ಚಲಾಯಿಸುವಾಗ ಯಾವಾಗಲೂ helmet ಧರಿಸಿಕೊಂಡೆ ವಾಹನವನ್ನು ಚಲಾಯಿಸುತ್ತಿದ್ದರು. ನನ್ನ ಮಗ helmet ಧರಿಸದೆ ಸದರಿ ಅಪಘಾತ ಪಡಿಸಿದ ವಾಹನದ ಡೀಸೆಲ್ ಟ್ಯಾಂಕರ್ ಗೆ ಡಿಕ್ಕಿಪಡಿಸಿ ತಲೆಗೆ, ಮುಖಕ್ಕೆ ಮತ್ತು ಹಣೆಗೆ ಪೆಟ್ಟುಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಗ ಇವತ್ತಿಗೂ ಚೇತರಿಸಿಕೊಂಡಿರುವುದಿಲ್ಲ. ನನ್ನ ಮಗ ಸದರಿ ಅಪಘಾತದ ಪರಿಣಾಮ ಚೇತರಿಸಿಕೊಂಡಿರುವುದಿಲ್ಲ ಮತ್ತು ಮಾತನಾಡಲು ಆಗುವುದಿಲ್ಲ ಎಂದಿನಂತೆ ಆತ ಓಡಾಡಿಕೊಂಡು ಇರಲು ಆಗುವುದಿಲ್ಲ ಎಂದು ವೈದ್ಯರ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ನನ್ನ ಮಗ ಗುಣಮುಖನಾಗಿರುವುದರಿಂದ ಸದರಿ ವೈದ್ಯರ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜುರಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಮೆಡಿಕಲ್ ಬಿಲ್ ಗಳನ್ನು ಹೆಚ್ಚಿನ ಹಣ ಪರಿಹಾರ ಪಡೆಯುವ ಸಲುವಾಗಿ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ವೈದ್ಯಕೀಯ ವೆಚ್ಚ ರೂ.5 ಲಕ್ಷ, ಊಟ ಉಪಚಾರ ರೂ.50,000/-, Attendance ವೆಚ್ಚ ರೂ.75,000/- ಮತ್ತು transportation ಗೆ ರು.50,000/- ಹಣ ವೆಚ್ಚ ಆಗಿರವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗನ implants

removal ಗೆ ಮತ್ತು Future Medical expenses ಗೆ ವೈದ್ಯರು estimation ನೀಡಿರುವುದಿಲ್ಲ ಎಂದರೆ ವೈದ್ಯರು ಹೇಳಿರುತ್ತಾರೆ, ಬರವಣಿಗೆಯಲ್ಲಿ ಕೊಟ್ಟಿರುವುದಿಲ್ಲ. ಆ ರೀತಿ ನನ್ನ ಮಗನಿಗೆ implants removal ಮತ್ತು Future Medical expenses ಖರ್ಚು ವೆಚ್ಚ ಇರವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಕೆ.ಪಿ.ಎಲ್ ಕಂಪನಿಯಲ್ಲಿ 8 ವರ್ಷದಿಂದ ಕೆಲಸ ಮಾಡುತ್ತಿದ್ದರು. ನನ್ನ ಮಗನ ಖಾತೆಗೆ ಸಂಬಳ ಜಮವಾಗುತಿತ್ತು ಮತ್ತು ಕೈಗು ಸಹ ಕೊಡುತಿದ್ದರು. ನನ್ನ ಮಗ ಸದರಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವುದಕ್ಕೆ ಮತ್ತು ಆ ರೀತಿ ಸಂಬಳವನ್ನು ಪಡೆಯುತ್ತಿರುವುದಕ್ಕೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜಪಡಿಸಿದ್ದೀರಾ ಎಂದರೆ ಇಲ್ಲ. ನನ್ನ ಮಗ ಸದರಿ ಕೆ ಪಿ ಎಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿರಲಿಲ್ಲ ಅದಕ್ಕಾಗಿ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತದ ಸಮಯದಲ್ಲಿ ನನ್ನ ಮಗನಿಗ 36 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಸದರಿ ಅಪಘಾತದ ತಮಯದಲ್ಲಿ ಪ್ರತ್ಯಕ್ಷ ದರ್ಶಿ ಮೋಹನ್ ರವರನ್ನು ಸಾಕ್ಷಿ ಮಾಡಿಸಲು ತೊಂದರೆ ಇದೇಯಾ ಎಂದರೆ ಇಲ್ಲ. ಸದರಿ ಅಪಘಾತ ಪಡಿಸಿದ ವಾಹನಕ್ಕೆ ಸೂಕ್ತ permit ಇರಲಿಲ್ಲ ಎಂದರೆ ಗೊತ್ತಿಲ್ಲ. ನನ್ನ ಮಗ ತನ್ನ ವಾಹನವನ್ನು ಸರಿಯಾಗಿ ಚಲಾಯಿಸದೆ ಆತನ ತಪ್ಪಿ ನಿಂದ ಸದರಿ ಅಪಘಾತವಾಗಿರುತ್ತದೆ ಮತ್ತು ಹೆಚ್ಚಿ ನ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:** *1* ನೇ ಎದುರುದಾರರ ಪರ ವಕೀಲರು ಗೈರುಹಾಜರಿದ್ದರಿಂದ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ: ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲ್ಪಟ್ಟಿದೆ)

(ಓ.ಹೆ.ಕೆ.ಸ.ಇ.)

IX ಹಿರಿಯ ಹೆಚ್ಚುವರಿ ನ್ಯಾಯಾಧೀಶರು,
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು